ದಿಃ 22.04.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀಸವಾಲು : ಶ್ರೀ ಪಿ ಬಿ ಎಸ್ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದ

ನಿಪಿ-71 ನನ್ನ ವೋಟರ್ ಐಡೆಂಟಿಟಿ ಕಾರ್ಡ್ ದೊರಕಲು ಅರ್ಜಿ ಕೊಟ್ಟದ್ದು ನಾನು. ಸದರಿ ಅರ್ಜಿಯ ಜೊತೆಗೆ ಏನೆಲ್ಲಾ ದಾಖಲೆ ಹಾಜರುಪಡಿಸಿದ್ದೇನೆಂದು ಈಗ ನನಗೆ ನೆನಪಿಲ್ಲ. ನಿಪಿ-72 ಆಧಾರ್ ಕಾರ್ಡ್ ಪಡೆದುಕೊಳ್ಳಲು ಅರ್ಜಿ ಸಲ್ಲಿಸುವಾಗ ಪಾನ್ ಕಾರ್ಡ್ ಮತ್ತು ಡ್ರೈವಿಂಗ್ ಲೈಸೆನ್ಸ್ ಹಾಜರುಪಡಿಸಿದ್ದೆ. ಮತ್ತು 73 ರೇಶನ್ ಕಾರ್ಡ್ ದಾಖಲೆಯನ್ನು ಪಡೆದುಕೊಳ್ಳಲು ಮನೆ ನಂಬರ್ ನಮೂದಿಸಿ ಅಪ್ಲಿಕೇಶನ್ ಕೊಟ್ಟಿರುತ್ತೇನೆ ಎನ್ನುತ್ತಾರೆ. ಕರೆಂಟ್ ಬಿಲ್ ನಂಬರ್ ತೆಗೆದುಕೊಂಡಿರುತ್ತಾರೆ. ನನ್ನ ಜನನ ಪ್ರಮಾಣ ಪತ್ರ ಇರುವುದಿಲ್ಲ, ಆದರೆ ಶಾಲೆಗೆ ಸಂಬಂಧಿಸಿದ ದಾಖಲೆ ಇದೆ. ಶಾಲೆಗೆ ಸಂಬಂಧಿಸಿದ ದಾಖಲೆಯನ್ನು ನನ್ನ ವಕೀಲರಿಗೆ ಕೊಟ್ಟಿಲ್ಲ. ನಿಪಿ-74 ಮ್ಯುಟೇಶನ್ ರಿಜಿಸ್ಟರ್ ಪ್ರತಿಯನ್ನು ಕೇಸಿನ ಸಮಯದಲ್ಲಿ ಕೊಟ್ಟಾಗಲೇ ಕೊಟ್ಟಿರುತ್ತೇನೆ. ನಿಪಿ-74 ದಾಖಲೆ ಹಾಜರುಪಡಿಸಲು ಕುರಿತಾದ ಕಾರಣ ಇದೆಯೇ ಎಂದರೆ ವಕೀಲರು ಹೇಳಿದ ಮೇರೆಗೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ.

ನನಗೆ ಸಂಬಂಧಿಸಿದ ಆಸ್ತಿಯಲ್ಲಿ ಒಟ್ಟು 10 ಸೆಂಟ್ಸ್ ಭೂ ಪರಿವರ್ತನೆ ಆರುತ್ತದೆ. ಅದರ ಸರ್ವೆ ನಂಬರ್ 335/4 ಎ-1 ಪಿ1. ಕನ್ವರ್ಷನ್ ಗೆ ಸಂಬಂಧಿಸಿದ ದಾಖಲೆಯನ್ನು 4 ನೇ ಪ್ರತಿವಾದಿಯವರಿಗೆ ನಾನು ಕೊಟ್ಟಿದ್ದೇನೋ ಇಲ್ಲವೋ ನನಗೆ ನೆನಪಿಲ್ಲ. ಕನ್ವರ್ಷನ್ ಗೆ ಸಂಬಂಧಿಸಿದ ದಾಖಲೆಗಳನ್ನು ಸಂಬಂಧ ಪಟ್ಟ ಇಲಾಖೆಯಿಂದ ಪಡೆದುಕೊಂಡು ಪರಿಶೀಲಿಸಿದ್ದೇನೆ. ನ್ಯಾಯಾಲಯದಿಂದ ಆಯುಕ್ತರು ಸ್ಥಳಪರಿಶೀಲಿನೆಗೆ ಬಂದಾಗ ಕನ್ವರ್ಷನ್ ಗೆ ಸಂಬಂಧಿಸಿದ ಸದರಿ ದಾಖಲೆಗಳನ್ನು ಆಯುಕ್ತರಿಗೆ ಕೊಟ್ಟದ್ದುಂಟಾ ಎಂದರೆ ವಕೀಲರಿಗೆ ಕೊಟ್ಟಿದ್ದೇನೆ ಎನ್ನುತ್ತಾರೆ. ಸರ್ವೆ ನಂಬರ್ 335/4 ಎ-1 ಪಿ1 ರ 25 ಸೆಂಟ್ಸ್ ನ ಯಾವ ಅಂಶ ಕನ್ವರ್ಷನ್ ಆಗಿದೆ ಎಂದರೆ ಗೊತ್ತಿಲ್ಲ. ನನ್ನ ಬಳಿ ಅಗತ್ಯವಿರುವ ದಾಖಲೆಗಳು ಇದ್ದರೂ ಸಹ ಅದನ್ನು ಹಾಜರುಪಡಿಸುವುದರಿಂದ ತಪ್ಪಿಸಲು ನಿಪಿ-75 ಮತ್ತು 76 ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲು : ಶ್ರೀ ಕೆ ವಿ ಬಿ 3 ನೇ ಪ್ರತಿವಾದಿ ಪರ ವಕೀಲರಿಂದ

1 ಮತ್ತು 2 ನೇ ಪ್ರತಿವಾದಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅದರಂತೆ ಅಳವಡಿಸಿಕೊಳ್ಳಲಾಯಿತು.

ಪಾಟೀ ಸವಾಲು 5 ನೇ ಪ್ರತಿವಾದಿ ಪರ ವಕೀಲರಿಂದಃ

ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗಾಗಿ ಕಾಲಾವಕಾಶ ನೀಡಿ ಮುಂದೂಡಲಾಯಿತು.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಬಂಟ್ವಾಳ.